**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

ಸಿ.ಸಿ. ನಂ. : 2600-2019 ದಿನಾಂಕಃ 12-03-2024
ಸಿ ಡಬ್ಲೂ : 04
ಪಿ ಡಬ್ಲೂ : 02

---------------------------------------------------------------------------------
-

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

| | |
|---|---|
| ಸಾಕ್ಷಿದಾರನ ಹೆಸರು | ಅಲಿಸಾಬ ಮಹಮ್ಮದಅಜುಮ ಮುಲ್ಲಾ |
| ಗಂಡ/ ತಂದೆಯ ಹೆಸರು | ಮಹಮ್ಮದಅಜುಮ |
| ವಯಸ್ಸು | 41 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಸಾಃ ಅಥಣಿ ತಾಃ ಅಥಣಿ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ

ದಿಃ 30-04-2019 ರಂದು ನಾನು ಹಳೆಯ ತಹಶೀಲ್ದಾರ ಆಫೀಸನ ಮುಂದೆ ನನ್ನ ಬೈಕನ್ನು ನಿಲ್ಲಿಸಿ ಅಲ್ಲಿ ನಿಂತಾಗ ಆರೋಪಿತನು ಏಕಾ ಏಕಿ ತನ್ನ ಮೋಟಾರ ಸೈಕಲನ್ನು ಅತಿ ಜೋರಿನಿಂದ ಚಲಾಯಿಸಿಕೊಂಡು ಬಂದು ನನ್ನ ಮೋಟಾರ ಸೈಕಲ್ಲಿನ ಎಡಗಡೆಗೆ ಹಾಯಿಸಿರುತ್ತಾನೆ. ಸದರಿ ಅಪಘಾತದಲ್ಲಿ ನನಗೆ ಬಲಗಾಲಿಗೆ ಪೆಟ್ಟಾಗಿತ್ತು. ಸದರಿ ಅಪಘಾತದ ನಂತರ ಚಾಸಾ 1 ರವರಿಗೆ ಅಲ್ಲಿ ಇದ್ದ ಜನರು ತಿಳಿಸಿರುತ್ತಾರೆ. ಆ ಬಳಿಕ ಚಾಸಾ 1 ರವರು ನನ್ನನ್ನು ಅಥಣಿಯ ಸರ್ಕಾರಿ ಆಸ್ಪತ್ರೆ ಕರೆದುಕೊಂಡು ಬಂದರು ಅದಾದ ನಂತರ ನನ್ನನ್ನು ಅಥಣಿಯ ಸಿದ್ದಾಂತ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಸದರಿ ಘಟನೆಯ ಕುರಿತು ಪಿರ್ಯಾದಿಯನ್ನು ಯಾರು ನೀಡಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ಮೋಟಾರ ಸೈಕಲ ನಂ. ಕೆಎ 23-0269. ಆರೋಪಿತರ ಮೋಟಾರ ಸೈಕಲ ನಂ. ಕೆಎ 23-2041 ಇರುತ್ತದೆ. ಆರೋಪಿತಿನ ಪರಿಚಯ ಇರುವುದಿಲ್ಲ ಆದರೆ ಆತನ ಹೆಸರು ಧರೇಪ್ಪ ಇರುತ್ತದೆ.ಆರೋಪಿತನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಈಗ ಸಾಕ್ಷಿಗೆ 2 ಛಾಯಾ ಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಮೊಟಾರ ಸೈಕಲನ್ನು ಗುರುತಿಸಿರುತ್ತಾರೆ. ಕಾರಣ ಅವುಗಳನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ಸದರಿ ಘಟನೆಯ ಕುರಿತು ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಸಾಕ್ಷಿಯನ್ನು ಭಾಗಃಶ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ವಕೀಲರಿಂದಃ-</u>

ಸದರಿ ಘಟನೆಯು ಆರೋಪಿತನಿಗೆ ಬಲಗಾಲ ಪಾದಕ್ಕೆ ಮತ್ತು ಬಲಗೈ ಮೋನಕೈಗೆ ಸಾದಾ ಗಾಯ ಆಗಿರುತ್ತದೆ ಎಂದರೆ ಸರಿ. ಚಾಸಾ 1 ರವರು ಪಿರ್ಯಾದಿಯನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ಆರೋಪಿತನನ್ನು ಅಪಘಾತವಾದಾಗ ನೋಡಿದರು ಅವನನ್ನು ಗುರುತಿಸಲು ಆಗಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂದು ರಾತ್ರಿ 9.15 ನಿಮಿಷ ಸಮಯ ಆಗಿರುತ್ತದೆ ಎಂದರೆ ಸರಿ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ವಿ.ಎಸ್.ಡಿ ರವರರಿಂದಃ

ನನಗೆ ನನ್ನ ಹೆಸರು ಅಲಿಸಾಬ ಮೊಹಮದ ಮುಲ್ಲಾ. ನಾನು ಆಸ್ಪತ್ರೆಗೆ ಯಾವ ದಿನಾಂಕದದ್ದು ದಾಖಲು ಆಗಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ಅಂದು ನಾನು ಮತ್ತು ನನ್ನ ತಮ್ಮ ಆಸ್ಪತ್ರೆಗೆ ಹೋಗಿರುತ್ತೆವೆ. ನಾನು ಅಪಘಾತ ವಾಗಗುವ ಪೂರ್ವದಲ್ಲಿ ಅಂದರೆ ದಿಃ 29-04-2019 ರಂದು ಅಥಣಿಯ ಸರ್ಕಾರಿಯ ಆಸ್ಪತ್ರೆಯಲ್ಲಿ ದಾಖಲಾಗಿದೆ ಎಂದರೆ ಸಾಕ್ಷಿಯು ಅಪಘಾತವಾದಾಗ ರಾತ್ರಿ ಹೋಗಿದ್ದೆ ಎನ್ನುತ್ತಾರೆ. ದಿಃ 29-04-2019 ರಂದು ಹೆಚ್ಚಿನ ಚಿಕಿತ್ಸೆಗೆ ಸಿಂದಾತ ಆಸ್ಪತ್ರೆಗೆ ದಾಖಲಾಗಿದೆ. ಸದರಿ ಪ್ರಮಾಣ ಪತ್ರದಲ್ಲಿ ದಾದಾ ಪಿರ ಮುಲ್ಲಾ ಎನ್ನುವ ಹೆಸರು ಇರುತ್ತದೆ ಆದ ಕಾರಣ ಸದರಿ ಪ್ರಮಾಣ ಪತ್ರ ನನ್ನಗೆ ನೀಡಿರುವುದಿಲ್ಲ ಎಂದರೆ ಸರಿ. ನನಗೆ ಹೇಳಿಕೆಯಲ್ಲಿ ನನ್ನ ಹೆಸರು ಅಲಿ ಸಾಬ ಮೊಹಮ್ಮದ ಮುಲ್ಲಾ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಗಡಿಬಿಡಿಯಲ್ಲಿ ಆ ರೀತಿ ಬರೆಸಿರುತ್ತೇನೆ ಎನ್ನುತಾರೆ. ನನ್ನ ಮೋಟಾರ ಸೈಕಲ ಹೌಂಡಾ ಸಿಟಿ 100 ಕಂಪನಿಯದು ಆಗಿರುತ್ತದೆ . ನಾನು ಅಂದು ತಹಶೀಲ್ದಾರ ಆಫೀಸಿನ ಮುಂದೆ ನಿಂತಿದೆ. ಹಳೆಯ ತಹಶೀಲ್ದಾರ ಆಫೀಸನ ಮುಂದೆ ಇರುವ ರಸ್ತೆ ಬಹಳ ದಟಣೆ ಇರುತ್ತದೆ ಎಂದರೆ ಸರಿ. ಆದ ಕಾರಣ ಅಲ್ಲಿ ವಾಹನಗಳು ಜೋರಾಗಿ ಒಡಾಡುವುದು ಕಷ್ಟ ಎಂದರೆ ಸರಿ. ಆರೋಪಿತನು ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದಾನೆ ಎಂದರೆ ಸರಿ. ನಾನೇ ಆರೋಪಿತನ ಮೋಟಾರ ಸೈಕಲಗೆ ಜೋರಾಗಿ ಅಪಘಾತ ಮಾಡಿ ಗಾಯ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ರಾತ್ರಿ 9.00 ಗಂಟೆ ಆಗಿತ್ತು. ಆಗ ಬಹಳ ಕತ್ತಲು ಇರುತ್ತದೆ ಎಂದರೆ ಸರಿ . ಆದ ಕಾರಣ ರಸ್ತೆಯಲ್ಲಿ ಯಾರು ಹೋಗುತ್ತಾರೆ ಎಂದು ಕಾಣುವುದಿಲ್ಲ ಎಂದರೆ ಸರಿ. ನನ್ನ ಹೆಸರು ಅಲಿಸಾಬ ಮೊಹಮದಅಜಿಮ ಮುಲ್ಲಾ ಇರುತ್ತದೆ ಆದರೆ ದಾದಾ ಪೀರ ಅನ್ನುವ ಹೆಸರು ನನ್ನದಲ್ಲ. ನಾನು ಚಲಾಯಿಸುತ್ತಿದ್ದ ಮೋಟಾರ ಸೈಕಲ ನನ್ನಗೆ ಸೇರಿದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆದುಕೊಳ್ಳಲು ಆರೋಪಿತನ ವಿರುದ್ಧ ಖೋಟಿ ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನನ್ನಗೆ ನೆನಪಿಲ್ಲ. ದಿಃ 03-05-2019 ರಂದು ಪಿರ್ಯಾದಿ ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದೂರು ನೀಡಲು ಏಕೆ ವಿಳಂಬ ಆಗಿರುತ್ತದೆ ಎಂದು ಎಲ್ಲಿಯು ಸಹ ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವನ್ನು ನಾನೇ ಮಾಡಿ ಆರೋಪಿತನ ವಿರುದ್ಧ ಖೋಟ್ಟಿ ಪಿರ್ಯಾದಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.